ರಂಗೋಲಿಯನ್ನು ಕ್ಯಾನ್ವಾಸ್ ಮೇಲೆ ತಂದವರು. ರಂಗೋಲಿ ಮಾಸಪತ್ರಿಕೆಯನ್ನೂ ಹೊರತರುವ ಮೂಲಕ ರಂಗೋಲಿಯ ನಾನಾ ಸಾಧ್ಯತೆಗಳನ್ನು ಪ್ರಸ್ತುತಪಡಿಸಿದವರು.

## ಚುಕ್ಕಿಯ ಜಾಡು ಹಿಡಿದು

ಬಾಲ್ಯದಿಂದಲೇ ಈ ಕಲೆಯನ್ನು ರೂಢಿಸಿಕೊಂಡು ಬಂದ ಭಾರತಿ ಇದನ್ನು ಶಾಶ್ವತವಾಗಿಡುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದರು. ಅದರ ಫಲವೇ ರಂಗೋಲಿಯ ಕುರಿತು ಸಂಶೋಧನೆ ಮತ್ತು ರಂಗೋಲಿ ಪೇಂಟಿಂಗ್‌ಗಳು. ಭಾರತಿ ಮರವಂತೆ ವೃತ್ತಿಯಲ್ಲಿ ಹಾವೇರಿಯ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಉಪನ್ಯಾಸಕಿ. ಪ್ರವೃತ್ತಿಯಲ್ಲಿ ರಂಗೋಲಿ ಕಲಾವಿದರಾಗಿದ್ದು, ಕರ್ನಾಟಕದಲ್ಲಿ ರಂಗೋಲಿ ಕಲೆಯಲ್ಲಿ ಡಾಕ್ಟರೇಟ್ ಪಡೆದ ಮೊದಲ ಸಂಶೋಧಕರು. ಕಳೆದ ಎಂಟು ವರ್ಷಗಳಿಂದ ಕನ್ನಡ ಮತ್ತು ಜಾನಪದ ವಿಭಾಗದಲ್ಲಿ ಉಪನ್ಯಾಸಕಿಯಾಗಿದ್ದಾರೆ.

ಕುಂದಾಪುರದ ಹಳ್ಳಿಯ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಭಾರತಿ, ಪ್ರತಿದಿವಸ ಮನೆಯಂಗಳದಲ್ಲಿ ಬಿಡಿಸುವ ರಂಗೋಲಿಯನ್ನು, ಹಬ್ಬ ಹರಿದಿನಗಳಲ್ಲಿ – ಮುಖ್ಯವಾಗಿ ಹೊಸಬೆಳೆಯ ಸಂದರ್ಭದಲ್ಲಿ ತುಳಸಿಕಟ್ಟೆಯ ಮುಂದೆ ಕೃಷಿಗೆ ಸಂಬಂಧಿಸಿದಂತೆ ಬಿಡಿಸುವ ರಂಗೋಲಿಗಳನ್ನು ಕೌತುಕದಿಂದ ನೋಡುತ್ತ ಬೆಳೆದವರು. ಹಾಗಾಗಿ ಅವರಲ್ಲೊಂದು ರಂಗೋಲಿ ಎಳೆ ತಾನೇತಾನಾಗಿ ಚಿತ್ತಾರವಾಗಿ ರೂಪುಗೊಂಡಿದೆ.

'ಹಳ್ಳಿಯಲ್ಲಿ ನನಗೆ ಅಂಥ ಪ್ರೋತ್ಸಾಹ ಇರಲಿಲ್ಲ. ಎಷ್ಟೇ ಚೆಂದವಾದ ರಂಗೋಲಿ, ಎಷ್ಟೇ ಹೊಸ ವಿನ್ಯಾಸದ ರಂಗೋಲಿ ಬಿಡಿಸಿದರೂ ಅದಕ್ಕೆ ಮಾನ್ಯತೆ ಇರುತ್ತಿರಲಿಲ್ಲ. ಅದಕ್ಕೊಂದು ಸ್ಪಷ್ಟರೂಪ ಸಿಕ್ಕಿದ್ದು ಕಾಲೇಜು ದಿನಗಳಲ್ಲಿ. ಕಾಲೇಜಿನಲ್ಲಿ ರಂಗೋಲಿ ಸ್ಪರ್ಧೆ ನಡೆದಾಗಲೆಲ್ಲ, ನನಗೇ ಬಹುಮಾನ ಬರುತ್ತಿತ್ತು. ನನ್ನ ರಂಗೋಲಿ ನೋಡಿದವರೆಲ್ಲ ಒಳ್ಳೆ ರತ್ನಗಂಬಳಿ ಹಾಸಿದ ಹಾಗಿದೆ ಎನ್ನುತ್ತಿದ್ದರು. ಇವೆಲ್ಲ ನನ್ನಲ್ಲಿ ರಂಗೋಲಿ ಕುರಿತು ಚಿಂತನೆಗೆ ಹಚ್ಚುವಲ್ಲಿ ಪ್ರೇರೇಪಿಸಿದವು. ಕನ್ನಡ ಪ್ರಾಧ್ಯಾಪಕರಾದ ಪ್ರೊ. ಕನರಾಡಿ ವಾದಿರಾಜ್ ಭಟ್ ಅವರು, ರಂಗೋಲಿ ಬಗ್ಗೆಯೇ ಅಧ್ಯಯನ ಮಾಡು ಅಂತ ಹೇಳಿದ್ರು. ಆಗಲೇ ನನ್ನಲ್ಲಿ ರಂಗೋಲಿಯ ಕುರಿತು ಹೊಸ ದೃಷ್ಟಿಕೋನ ಬೆಳೆಯಲು ಸಾಧ್ಯವಾಗಿದ್ದು' ಎಂದು ನೆನಪುಗಳ ಚುಕ್ಕಿಗಳನ್ನು ಬಿಡಿಸುತ್ತಾರೆ.



ಬುಡಕಟ್ಟು ಮಹಿಳೆಯರೊಂದಿಗೆ ಭಾರತಿ ಮರವಂತೆ.

## ಶಿಬಿರದಲ್ಲಿ ರಂಗೋಲಿ ಪಾಠ

'ಬೇಸಿಗೆ ಶಿಬಿರಗಳಲ್ಲಿ ಚಿತ್ರಕಲೆ ಸಾಮಾನ್ಯ; ರಂಗೋಲಿಯನ್ನು ಶಿಬಿರಗಳಲ್ಲಿ ಪ್ರಮುಖ ವಿಷಯವಾಗಿ ಬೋಧಿಸುತ್ತಿರಲಿಲ್ಲ. ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ಸಂಯೋಜಕಿಯಾಗಿದ್ದ ಎ.ಲಕ್ಷ್ಮೀಬಾಯಿಯವರು ನನ್ನ ರಂಗೋಲಿ ಕಲೆಯನ್ನು ಗುರುತಿಸಿ ಬಿವಿಟಿಗೆ ಶಿಬಿರಗಳಲ್ಲಿ ಮಕ್ಕಳಿಗೆ ಹೇಳಿಕೊಡಲು ಹೇಳಿದರು. ರಂಗೋಲಿ ಹಾಕುವುದೊಂದು ಸ್ಕಿಲ್. ಇದೊಂದು ಪರಂಪರೆಯ ಕಲೆಯನ್ನು ಯಾಕೆ ನಮ್ಮ ವಿದ್ಯಾರ್ಥಿಗಳಿಗೆ ಕಲಿಸಬಾರದು ಅಂತ ಶಿಬಿರಗಳಲ್ಲಿ ರಂಗೋಲಿಯ ವಿಷಯವನ್ನು ಇಟ್ಟರು. ಹೀಗೆ ಅಧಿಕೃತವಾಗಿ ಶಿಬಿರಗಳಲ್ಲಿ ರಂಗೋಲಿಯನ್ನು ಕಲಿಸಿದ್ದು ಬಿವಿಟಿ ಆವರಣದಲ್ಲಿ. ನಂತರ ನೂರಾರು ಬಾರಿ ಸಂಪನ್ಮೂಲ ವ್ಯಕ್ತಿಯಾಗಿ ಬಿವಿಟಿಗೂ ಹೋಗಿದ್ದೆ, ಬೇರೆಬೇರೆ ಕಡೆಗೂ ಹೋಗಿದ್ದೆ' ಎನ್ನುವ ಭಾರತಿ ಮರವಂತೆ, ರಂಗೋಲಿಯನ್ನು ಶಿಬಿರಗಳಲ್ಲಿ ಹೇಳಿಕೊಡುವ ಕಾಯಕವನ್ನು ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಅರಸೀಕೆರೆ, ಹಾಸನ, ಸಾಗರ, ಉಡುಪಿ, ಬೈಂದೂರು, ಹರಪನಹಳ್ಳಿ, ಕುಂದಾಪುರ ಮತ್ತು ಮುಂಬೈಯಂತಹ ನಗರಗಳಲ್ಲಿ ರಂಗೋಲಿ ಪ್ರದರ್ಶನ ಮತ್ತು ತರಬೇತಿ ನೀಡಿದ್ದಾರೆ. ಈವರೆಗೆ ಸುಮಾರು 5000ಕ್ಕೂ ಅಧಿಕ ವಿದ್ಯಾರ್ಥಿಗಳು ಇವರಿಂದ ರಂಗೋಲಿ ತರಬೇತಿ ಪಡೆದಿದ್ದಾರೆ.

## ಹೆಸರು ತಂದ ರಂಗೋಲಿ ಪೇಂಟಿಂಗ್

ರಂಗೋಲಿಯನ್ನು ಶಾಶ್ವತ ಕಲೆಯಾಗಿಸುವ ನಿಟ್ಟಿನಲ್ಲಿ ಇಟ್ಟ ಹೊಸ ಪ್ರಯೋಗವೇ 'ರಂಗೋಲಿ ಪೇಂಟಿಂಗ್'. ಉಡುಪಿ ಕೃಷ್ಣ ಮಠದಲ್ಲಿ ರಂಗೋಲಿ ಪೇಂಟಿಂಗ್ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದು ಭಾರತೀಯ ವಿಕಾಸ ಟ್ರಸ್ಟ್‌ನ ಆಗಿನ ಚೇರ್ಮನ್ ಕೆ.ಎಂ.ಉಡುಪ. ಸಂಘಟನೆ, ಹಣ, ಸ್ಥಳ ಎಲ್ಲವನ್ನೂ ಅವರೇ ನಿಂತು ಒದಗಿಸಿಕೊಟ್ಟರು.

'ಅದೊಂದು ಹೊಸ ಪ್ರಯೋಗವಾಗಿತ್ತು. ಕ್ಯಾನ್ವಾಸ್ ಮೇಲೆ ರಂಗೋಲಿಯನ್ನು ತರುವ ಪ್ರಯತ್ನವದು. ಗೋಂದು, ಅಂಟು ಎಲ್ಲ ಮಿಶ್ರಣ ಮಾಡಿ ರಂಗೋಲಿಯನ್ನು ಕ್ಯಾನ್ವಾಸ್ ಮೇಲೆ ಬಿಡಿಸಿದೆ. ಅದಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿತು ಮತ್ತು ಇದರಿಂದ ಹಣವೂ ಸಾಕಷ್ಟು ಬಂತು.

ಭಾರತಿ ಮರವಂತೆ

